**PW - 2**

**ದಿಃ 08.01.2025 ರಂದು ಮಾಡಿದ ಅರ್ಜಿಯಲ್ಲಿನ ಆದೇಶದಂತೆ, ಪ್ರಾಸಾ-2- ಸುರೇಶ ಪಾಯಪ್ಪಗೌಡರ ರವರನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು - 06.02.2025**

## ಮುಂದುವರೆದ ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರವರಿಂದಃ

9. ನಾವು ಮತ್ತು ಪೋಲೀಸರು ದೋಬಿ ಘಾಟಗೆ ಹೋದ ನಂತರ ಸುಮಾರು 5 ರಿಂದ 10 ನಿಮಿಷ ವಾಚ್ ಮಾಡುತ್ತಾ ನಿಂತುಕೊಂಡಿದ್ದೆವು. ಆಗ 4 ರಿಂದ 5 ಜನರು ರಸ್ತೆಯಲ್ಲಿ ಮಾರಕಾಸ್ತ್ರಗಳನ್ನು ಹಿಡಿದುಕೊಂಡು ನಿಂತುಕೊಂಡಿದ್ದರು. ಅಲ್ಲಿ ಒಂದು ಕಾರ ಇತ್ತು. ಸದರಿ ಕಾರಿನಲ್ಲಿ ಇಬ್ಬರು ವ್ಯಕ್ತಿಗಳು ಇದ್ದರು. ಹಾಗೆಯೇ ಅಲ್ಲಿ ಒಂದು ಬೈಕ ಕೂಡಾ ಇತ್ತು. ಸದರಿ ಬೈಕ ಹತ್ತಿರ ಒಬ್ಬ ವ್ಯಕ್ತಿ ಇದ್ದರು. ಆಗ ಲಕ್ಷ್ಮೇಶ್ವರ ರಸ್ತೆಯಿಂದ ಒಂದು ಲಾರಿ ಬಂದಿದ್ದು, ಆಗ ನಿಂತುಕೊಂಡ ಸದರಿ 4 – 5 ಜನರು ಸದರಿ ಲಾರಿಗೆ ಅಡ್ಡ ಹಾಕಿರುತ್ತಾರೆ. ಆ ಲಾರಿಯ ಚಾಲಕನು ಅದನ್ನು ನಿಲ್ಲಿಸದೇ ಗಂಗಿಮಡಿ ರಸ್ತೆಯಲ್ಲಿ ಹೋಗಿರುತ್ತಾನೆ. ಆಗ ಪೋಲೀಸರು ಸದರಿ 4 – 5 ಜನರನ್ನು ಹಿಡಿದಿರುತ್ತಾರೆ. ಹಾಗೆಯೇ ಕಾರಿನಲ್ಲಿದ್ದ ಇಬ್ಬರು ವ್ಯಕ್ತಿಗಳನ್ನು ಕೂಡಾ ಹಿಡಿದಿರುತ್ತಾರೆ ಮತ್ತು ಬೈಕನ ಹತ್ತಿರ ಇದ್ದ ಇನ್ನೊಬ್ಬ ವ್ಯಕ್ತಿಯನ್ನು ಕೂಡಾ ಪೋಲೀಸರು ಹಿಡಿದಿರುತ್ತಾರೆ. ಆ ದಿನ ಪೋಲೀಸರು ಒಟ್ಟು 8 ಜನರನ್ನು ಹಿಡಿದಿರುತ್ತಾರೆ.

10. ನಂತರ ಪೋಲೀಸರು ಸದರಿ 8 ಜನರನ್ನು ವಿಚಾರಿಸಿರುತ್ತಾರೆ. ಅವರು ಹರಿಯಾಣ ಮತ್ತು ಹಾವೇರಿಯವರು ಎಂದು ಹೇಳಿರುತ್ತಾರೆ. ನಂತರ ಪೋಲೀಸರು ಸದರಿ 8 ಜನರನ್ನು ರಸ್ತೆಯಲ್ಲಿ ನಿಲ್ಲಿಸಿ, ಅವರ ಹತ್ತಿರ ಇದ್ದ ಮಾರಕಾಸ್ತ್ರಗಳನ್ನು ಹಾಗೂ ಕಾರಿನಲ್ಲಿದ್ದ ಗ್ಯಾಸ ಕಟರ್, ಚಾಕು, ಖಾರದ ಪುಡಿ, ಸುತ್ತಿಗೆ, ಗನ್, ಸ್ಕ್ರೂ ಡ್ರೈವರ ಹಾಗೂ ಬೈಕಿನಲ್ಲಿದ್ದ ಒಂದು ದೊಣ್ಣೆ ತರದ ವಸ್ತು ಅಂದರೆ ಕಬ್ಬಿಣದ ರಾಡ ಇವುಗಳನ್ನು ವಶಪಡಿಸಿಕೊಂಡಿರುತ್ತಾರೆ. ಆ ಸಮಯದಲ್ಲಿ ಫೋಟೋಗಳನ್ನು ತೆಗೆದಿರುತ್ತಾರೆ.

11. ಆ 8 ಜನರನ್ನು ನೋಡಿದರೆ ಗುರುತಿಸುತ್ತೇನೆ. ಈಗ ತೋರಿಸಿದ ನಿಪಿ-3 ರಲ್ಲಿ ಸದರಿ 8 ಜನರ ಭಾವಚಿತ್ರಗಳು ಇರುತ್ತವೆ. ಅವರಲ್ಲಿ 2, 3, 6 ಮತ್ತು 8 ನೇ ಆರೋಪಿಗಳು ಈಗ ನ್ಯಾಯಾಲಯದಲ್ಲಿ ಹಾಜರ ಇರುತ್ತಾರೆ. ನಿಪಿ-3 ರಲ್ಲಿ ಕಾಣಿಸುವ ವಸ್ತುಗಳನ್ನೇ ಆ ದಿನ ಪೋಲೀಸರು ಜಪ್ತ ಮಾಡಿಕೊಂಡಿರುತ್ತಾರೆ.

12. ಸ್ಥಳದಲ್ಲಿದ್ದ ಕಾರ ಮತ್ತು ಬೈಕನ್ನು ನೋಡಿದರೆ ಗುರುತಿಸುತ್ತೇನೆ. ಈಗ ತೋರಿಸಿದ ನಿಪಿ-7 ರಲ್ಲಿ ಸದರಿ ಕಾರಿನ ಭಾವಚಿತ್ರ ಇರುತ್ತದೆ ಮತ್ತು ನಿಪಿ-8 ರಲ್ಲಿ ಸದರಿ ಬೈಕಿನ ಭಾವಚಿತ್ರ ಇರುತ್ತದೆ.

13. ಈಗ ತೋರಿಸಿದ ನಿಪಿ-4 ರಿಂದ 6, 9 ರಿಂದ 12 ಫೋಟೋಗಳನ್ನು ಅದೇ ಸಮಯದಲ್ಲಿ ಗುನ್ನಾ ಸ್ಥಳದಲ್ಲಿ ತೆಗೆಯಲಾಗಿರುತ್ತದೆ. ನಿಪಿ-3 ರಿಂದ 10 ಫೋಟೋಗಳಲ್ಲಿ ನನ್ನ ಭಾವಚಿತ್ರಗಳು ಇರುತ್ತವೆ.

14. ಈಗ ತೋರಿಸಿದ ನಿಪಿ-13 ರಿಂದ 16 ಫೋಟೋಗಳು ಸದರಿ ಕಾರಿನ (ಕಾರನ್ನು ಮಧ್ಯಂತರ ಸ್ವಾಧೀನಕ್ಕೆ ಕೊಡುವಾಗ ತೆಗೆದ ಫೋಟೋಗಳಾಗಿರುತ್ತವೆ) ಫೋಟೋಗಳಾಗಿರುತ್ತವೆ.

15. ನಿಪಿ-1 ನ್ನು ಪೋಲೀಸರು ಸ್ಥಳದಲ್ಲಿಯೇ ತಯಾರಿಸಿರುತ್ತಾರೆ. ನಿಪಿ-1 ಪಂಚನಾಮೆಯನ್ನು ಬೆಳಗಿನ ಜಾವ 01.30 ರಿಂದ 03.30 ರ ವರೆಗೆ ಬರೆಯಲಾಗಿರುತ್ತದೆ. ನಿಪಿ-1 ಕ್ಕೆ ನಾನು, ಇನ್ನೊಬ್ಬ ಪಂಚರು, ಸದರಿ 8 ಜನ ಆರೋಪಿಗಳು ಮತ್ತು ಪೋಲೀಸರು ಸಹಿಗಳನ್ನು ಮಾಡಿರುತ್ತೇವೆ.

**(ಈ ಹಂತದಲ್ಲಿ, ಸರ್ಕಾರಿ ಅಭಿಯೋಜಕರು, ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟಿ ಸವಾಲಿಗೆ ಅನುಮತಿ ಕೋರಿದ್ದರಿಂದ, ಅನುಮತಿಸಲಾಯಿತು.)**

**ಪಾಟಿ ಸವಾಲುಃ ಪಿಪಿಯವರಿಂದಃ**

16. ಅವರ ಹೆಸರುಗಳನ್ನು ವಿಚಾರಿಸಿದಾಗ - 1) ಶಾಬೀರ ತಂದೆಃ ಮುಸಾ, ರಾಜ್ಯಃ ಹರಿಯಾಣ, 2) ಮಹ್ಮದಸೋಹಿಲಖಾನ ಉರ್ಫ ಸೋನುಖಾನ, ಸಾಃ ಬಾಂಬೆ ಹಾಲಿವಸ್ತಿಃ ಹುಬ್ಬಳ್ಳಿ 3) ಇಸಾಕ ತಂದೆಃ ನಜೀರಅಹ್ಮದ ಅತ್ತಾರ, ಸಾಃ ಹಾವೇರಿ ಹಾಲಿವಸ್ತಿಃ ಕಾರವಾರ 4) ಶರೀಫ ತಂದೆಃ ರೆಹಮಾನ, ರಾಜ್ಯಃ ಹರಿಯಾಣ, 5) ರಫೀಕ ತಂದೆಃ ಬಸೀರ, ರಾಜ್ಯಃ ಹರಿಯಾಣ, 6) ಇಮ್ತಿಯಾಜ ಗೋಕಾಕ, ಸಾಃ ಹುಬ್ಬಳ್ಳಿ, 7) ಅನ್ವರ ತಂದೆಃ ಮಹ್ಮದಅಲಿ ಸಾಃ ಮುಂಬಯಿ, ರಾಜ್ಯಃ ಮಹಾರಾಷ್ಟ್ರ, 8) ಮೌಲಾಲಿ ತಂದೆಃ ಗೂಡುಸಾಬ ಕರ್ಜಗಿ, ಸಾಃ ನಾಗಿನಮಟ್ಟಿ ಎಂದು ಹೇಳಿರುತ್ತಾರೆ ಎಂದರೆ ಸರಿ.

17. 1 ನೇ ಆರೋಪಿಯಿಂದ ಕಬ್ಬಿಣದ ಸಳಿ, ಒಂದು ಸ್ಯಾಮಸಂಗ ಕಂಪನಿಯ ಕೀ ಪ್ಯಾಡ ಮೊಬೈಲನ್ನು, **2** ನೇ ಆರೋಪಿಯಿಂದ ಖಾರದ ಪುಡಿ ಇದ್ದ ಒಂದು ಸಣ್ಣ ಪ್ಲಾಸ್ಟಿಕ ಕವರನ್ನು, ಒಂದು ಆ್ಯಪಲ್ ಕಂಪನಿಯ ಐ ಫೋನನ್ನು ಹಾಗೂ ಒಂದು ವಿವೋ ಕಂಪನಿಯ ಎಂಡ್ರ್ಯಾಡ್ ಮೊಬೈಲನ್ನು, 3 ನೇ ಆರೋಪಿಯಿಂದ ಒಂದು ಸಣ್ಣ ಪ್ಲಾಸ್ಟಿಕ ಹಿಡಿಕೆ ಇದ್ದ ಚಾಕುವನ್ನು, 4 ನೇ ಆರೋಪಿಯಿಂದ ಒಂದು ನೋಕಿಯಾ ಕಂಪನಿಯ ಕೀ ಪ್ಯಾಡ ಮೊಬೈಲನ್ನು, 5 ನೇ ಆರೋಪಿಯಿಂದ **ಒಂದು** ಸ್ಯಾಮಸಂಗ ಕಂಪನಿಯ ಕೀ ಪ್ಯಾಡ ಮೊಬೈಲನ್ನು, 6 ನೇ ಆರೋಪಿಯಿಂದ ಒಂದು ಐ ಬಾಲ್ ಕಂಪನಿಯ ಕೀ ಪ್ಯಾಡ ಮೊಬೈಲನ್ನು, 7 ನೇ ಆರೋಪಿಯಿಂದ ಒಂದು ಸ್ಯಾಮಸಂಗ ಕಂಪನಿಯ ಆ್ಯಂಡ್ರ್ಯಾಡ್

ಮೊಬೈಲನ್ನು ಹಾಗೂ 8 ನೇ ಆರೋಪಿಯಿಂದ ಒಂದು ನೋಕಿಯಾ ಕಂಪನಿಯ ಕೀ



ಪ್ಯಾಡ ಮೊಬೈಲನ್ನು ಹಾಗೂ ಇನ್ನೊಂದು ಪೀಸ್ ಕೀ ಪ್ಯಾಡ ಮೊಬೈಲನ್ನು ಹಾಗೂ 8 ನೇ ಆರೋಪಿ ನಿಲ್ಲಿಸಿಕೊಂಡು ನಿಂತಿದ್ದ ಮೋಟರ ಸೈಕಲ ಟ್ಯಾಂಕ ಕವರಿನಲ್ಲಿದ್ದ ಒಂದು ಕಟ್ಟಿಗೆಯ ಹಿಡಿಕೆ ಇದ್ದ ಗುಣಕ ಇವುಗಳನ್ನು ಪೋಲೀಸರು ವಶಪಡಿಸಿಕೊಂಡಿರುತ್ತಾರೆ ಎಂದರೆ ಸರಿ.

**ಮುಂದುವರೆದ ಪಾಟಿ ಸವಾಲುಃ ಶ್ರೀ ಎಂ.ಎಂ. ಕುಕನೂರ, 2 & 6 ನೇ ಆರೋಪಿ ಪರ ವಕೀಲರಿಂದಃ**

18. ನಿಪಿ-1 ಕ್ಕೆ ನಾನು ಮತ್ತು ಚಾಸಾ-2 ರವರು ಮೊದಲು ಸಹಿ ಮಾಡಿರುತ್ತೇವೆ. ಚಾಸಾ-2 ರವರು ನನಗೆ ಹಳೆ ಬಸ್ ನಿಲ್ದಾಣದಲ್ಲಿ ಭೇಟಿಯಾಗಿರುತ್ತಾರೆ. ನಾವು ನಿಂತಿದ್ದ ಸ್ಥಳಕ್ಕೂ ಮತ್ತು ಕಾರು ನಿಲ್ಲಿಸಿದ ಜಾಗಕ್ಕೂ 8 ರಿಂದ 10 ಅಡಿ ಅಂತರ ಇತ್ತು. ನಾವು ಗುನ್ನಾ ಸ್ಥಳದ ಯಾವ ದಿಕ್ಕಿಗೆ ನಿಂತಿದ್ದೆವು ಎಂದು ನನಗೆ ಹೇಳಲು ಆಗುವುದಿಲ್ಲ. ಪೋಲೀಸರು ಗುನ್ನಾ ಸ್ಥಳದ ಯಾವ ದಿಕ್ಕಿಗೆ ನಿಂತಿದ್ದರು ಎಂದು ನನಗೆ ಹೇಳಲು ಆಗುವುದಿಲ್ಲ. ಗುನ್ನಾ ಸ್ಥಳದ ಚೆಕ್ಕಬಂದಿಯನ್ನು ನನಗೆ ಹೇಳಲು ಆಗುವುದಿಲ್ಲ.

19. ಮು.ಮಾ.1 ರಿಂದ 28 ನ್ನು ಪೋಲೀಸರು ನನಗೆ ತೋರಿಸಿರುವುದಿಲ್ಲ ಎಂದರೆ ಸರಿಯಲ್ಲ. ಜಪ್ತಾದ ವಸ್ತುಗಳ ಮೇಲೆ ವಿಶೇಷ ಗುರುತುಗಳು ಇರುವುದಿಲ್ಲ. ಕಾರ ನಂಬರನ್ನು ಹಾಗೂ ಬೈಕಿನ ನಂಬರನ್ನು ನನಗೆ ಹೇಳಲು ಆಗುವುದಿಲ್ಲ. 2 ಮತ್ತು 6 ನೇ ಆರೋಪಿಗಳು ಎಂತಹ ಬಣ್ಣದ ಬಟ್ಟೆಗಳನ್ನು ಹಾಕಿಕೊಂಡಿದ್ದರು ಎಂದು ನನಗೆ ಹೇಳಲು ಆಗುವುದಿಲ್ಲ.

20. ಪೋಲೀಸರು ಫೋಟೋಗಳನ್ನು ತೆಗೆದಿರುತ್ತಾರೆ. ಆದರೆ ಕ್ಯಾಮೆರಾ ಯಾವ ಕಂಪನಿಯದು ಇತ್ತು ಎಂದು ನನಗೆ ಹೇಳಲು ಆಗುವುದಿಲ್ಲ. ಪಂಚನಾಮೆಯನ್ನು ಠಾಣೆಯಲ್ಲಿ ಬರೆದಿರುತ್ತಾರೆ ಎಂದರೆ ಸರಿಯಲ್ಲ. ಪಂಚನಾಮೆಯನ್ನು ಯಾರು ಬರೆದಿರುತ್ತಾರೆ ಎಂದು ನನಗೆ ಹೇಳಲು ಆಗುವುದಿಲ್ಲ. ಪಂಚನಾಮೆಯನ್ನು ನನಗೆ ಓದಿ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ಪಂಚನಾಮೆಯನ್ನು ನಾನು ಓದಿ ನೋಡಿರುವುದಿಲ್ಲ. ಪಂಚನಾಮೆಗೆ ನಾನು 2 ರಿಂದ 3 ಸಹಿಗಳನ್ನು ಮಾಡಿರುತ್ತೇನೆ. ಪಂಚನಾಮೆಯನ್ನು ಪೆನ್ನಿನಿಂದ ಬರೆದಿರುತ್ತಾರೋ ಅಥವಾ ಬೇರೆ ಯಾವುದರಿಂದ ಬರೆದಿರುತ್ತಾರೋ ಎಂದು ನನಗೆ ಹೇಳಲು ಆಗುವುದಿಲ್ಲ.

21. ನಾನು ಆ ದಿನ ಸ್ಥಳಕ್ಕೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ಕತ್ತಲು ಇದ್ದುದರಿಂದ ಒಬ್ಬರ ಮುಖ ಒಬ್ಬರಿಗೆ ಕಾಣಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. ಬೀದಿ ದೀಪದ ಬೆಳಕು ಯಾವ ದಿಕ್ಕಿಗೆ ಇತ್ತು ಎಂದು ನನಗೆ ಹೇಳಲು ಆಗುವುದಿಲ್ಲ. ನಾನು ಖಾಯಂ ಆಗಿ ಚಹಾ ಮಾರಾಟ ಮಾಡಲು ಪೋಲೀಸ ಠಾಣೆಗೆ ಹೋಗುತ್ತೇನೆ ಎಂದರೆ ಸರಿಯಲ್ಲ. ನಾನು ಪೋಲೀಸರ ಮಾತು ಕೇಳಿ ಸುಳ್ಳು ಸಾಕ್ಷಿ

ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿನ ನಾನು ಪೋಲೀಸ ಠಾಣೆಗೆ ಹೋಗುವುದಕ್ಕಿಂತ ಮೊದಲು, ಹಳೆ ಬಸ್ ನಿಲ್ದಾಣದ ಹತ್ತಿರ ಹಾಗೂ ರೋಟರಿ ಸರ್ಕಲನಲ್ಲಿ ಚಹಾ ಮಾರಾಟ ಮಾಡಿರುತ್ತೇನೆ.



22. ಜಪ್ತಾದ ವಸ್ತುಗಳಿಗೂ ಮತ್ತು 2 ಮತ್ತು 6 ನೇ ಆರೋಪಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. 2 ಮತ್ತು 6 ನೇ ಆರೋಪಿಗಳಿಂದ ಯಾವುದೇ ವಸ್ತುಗಳನ್ನು ಜಪ್ತ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

**<u>ಪಾಟಿ ಸವಾಲುಃ ಶ್ರೀ ಜೆ.ವಿ. ಪಠಾಣ, 3 ನೇ ಆರೋಪಿ ಪರ ವಕೀಲರಿಂದಃ</u>**

**(ಶ್ರೀಮತಿ ಆರ್.ಡಿ. ಕರ್ಜಗಿ ವಕೀಲರು ಶ್ರೀ ಜೆ.ವಿ. ಪಠಾಣ ವಕೀಲರ ಪರವಾಗಿ 2 ಮತ್ತು 6 ನೇ ಆರೋಪಿ ಪರವಾಗಿ ಮಾಡಿದ ಪಾಟಿ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.)**

**<u>ಪಾಟಿ ಸವಾಲುಃ ಶ್ರೀ ಎಂ.ಎ. ಮೌಲ್ವಿ, ವಕೀಲರಿಂದ ಶ್ರೀ ಐ.ಎ. ಬೇಪಾರಿ, 8 ನೇ ಆರೋಪಿ ಪರ ವಕೀಲರ ಪರವಾಗಿಃ</u>**

23. ನಾನು ಸುಮಾರು 6 ತಿಂಗಳುಗಳ ಕಾಲ ಚಹಾ ಮಾರಾಟ ಮಾಡುತ್ತಿದ್ದೆನು. ನಮ್ಮ ಮನೆಯು ಪೋಲೀಸ ಠಾಣೆಯಿಂದ 2 ಕಿಮೀ ದೂರ ಇರುತ್ತದೆ. ನಮ್ಮ ಮನೆಯು ದೋಬಿ ಘಾಟದಿಂದ 4 ಕಿಮೀ ದೂರ ಇರುತ್ತದೆ. ದೋಬಿ ಘಾಟದಿಂದ ಪೋಲೀಸ ಠಾಣೆಯು 6 ಕಿಮೀ ದೂರ ಇರುತ್ತದೆ.

24. ಯಾವ ಹೆಸರು ಮತ್ತು ಯಾವ ಪದನಾಮ ಇರುವ ಪೋಲೀಸರು ನನ್ನನ್ನು ಕರೆಯಲು ಬಂದಿರುತ್ತಾರೆ ಎಂದು ನಿರ್ದಿಷ್ಟವಾಗಿ ನನಗೆ ಹೇಳಲು ಆಗುವುದಿಲ್ಲ. ಪೋಲೀಸ ಠಾಣೆಯ ಎದುರಿಗೆ ಬಸ್ ನಿಲ್ದಾಣ ಇರುತ್ತದೆ ಮತ್ತು ಅಲ್ಲಿ ಚಹಾ ಮಾರುವವರು ಮತ್ತು ಸಾಕಷ್ಟು ಪ್ರಯಾಣಿಕರು ಇರುತ್ತಾರೆ ಎಂದರೆ ಸರಿ. ಪೋಲೀಸ ಠಾಣೆಯಿಂದ ದೋಬಿ ಘಾಟಕ್ಕೆ ಹೋಗುವ ರಸ್ತೆಯಲ್ಲಿ ಸಾಕಷ್ಟು ಜನರು ಓಡಾಡುತ್ತಾರೆ ಎಂದರೆ ಸರಿ.

25. ನಾವು ಪೋಲೀಸರ ಜೊತೆ ಹೋದ ಇಲಾಖಾ ವಾಹನದ ನಂಬರನ್ನು ನನಗೆ ಹೇಳಲು ಆಗುವುದಿಲ್ಲ. ಸಾಕ್ಷಿ ಸ್ವತಃ ಎರಡು ಜೀಪುಗಳಲ್ಲಿ ಹೋಗಿರುತ್ತೇವೆ ಎಂದು ಹೇಳಿರುತ್ತಾರೆ. ದೋಬಿ ಘಾಟದ ಸುತ್ತಲೂ ಜನರು ವಾಸ ಮಾಡುವ ಸ್ಥಳ ಇರುತ್ತದೆ ಎಂದರೆ ಸರಿ. ದೋಬಿ ಘಾಟ ಸರ್ಕಲ ಜನದಟ್ಟಣೆ ಇರುವ ಸ್ಥಳವಾಗಿರುತ್ತದೆ ಮತ್ತು ಅಲ್ಲಿ ಎರಡು ರಾಜ್ಯ ಹೆದ್ದಾರಿಗಳು ಸೇರಿರುವ ಸ್ಥಳ ಇರುತ್ತದೆ ಎಂದರೆ ಸರಿ.

26. ಈ ಪ್ರಕರಣದಲ್ಲಿ ನಾನು ಸಹಿ ಮಾಡಿದಂತಹ ಯಾವುದೇ ದಾಖಲೆಗಳನ್ನು ತೆಗೆದುಕೊಂಡು

ಓದಿರುವುದಿಲ್ಲ. 8 ನೇ ಆರೋಪಿಯ ಹೆಸರು ನನಗೆ ಗೊತ್ತಿಲ್ಲ. 8 ನೇ ಆರೋಪಿ ಯಾವ ಬಣ್ಣದ ಬಟ್ಟೆ ಹಾಕಿಕೊಂಡಿದ್ದನು ಎಂದು ನನಗೆ ಹೇಳಲು ಆಗುವುದಿಲ್ಲ. 8 ನೇ ಆರೋಪಿ



ಹತ್ತಿರ ಕಟ್ಟಿಗೆ ಹಿಡಿಕೆ ಇರುವ ದೊಣ್ಣೆ ರೀತಿಯ ವಸ್ತು ಇತ್ತು. 8 ನೇ ಆರೋಪಿಯ ಅಂಗ ಜಡ್ತಿಯನ್ನು ಮಾಡಲಾಗಿರುವುದಿಲ್ಲ. 8 ನೇ ಆರೋಪಿ ಹತ್ತಿರ ಕಟ್ಟಿಗೆ ಹಿಡಿಕೆ ಇರುವ ದೊಣ್ಣೆ ರೀತಿಯ ವಸ್ತು ಇತ್ತು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

27. ಪೋಲೀಸರು ನನಗೆ ರಾತ್ರಿ ಚಹಾ ಮಾರಾಟ ಮಾಡಲು ಅನುಕೂಲ ಮಾಡಿಕೊಟ್ಟಿದ್ದರಿಂದ ನಾನು ಅವರ ಪರವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಘಟನಾ ಸ್ಥಳಕ್ಕೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಯಾವುದೇ ಪಂಚನಾಮೆಯನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಇಂತಹ ವ್ಯಕ್ತಿಗಳಿಂದ ಇಂತಹ ವಸ್ತುಗಳನ್ನು ಜಪ್ತ ಮಾಡಲಾಗಿದೆ ಎಂದು ನನಗೆ ಲಿಸ್ಟನ್ನು ಕೊಟ್ಟಿರುವುದಿಲ್ಲ.

**(ಉಳಿದಂತೆ, ವಕೀಲರು 2 ಮತ್ತು 6 ನೇ ಆರೋಪಿ ಪರವಾಗಿ ಮಾಡಿದ ಪಾಟಿ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.)**

**ಮರು ವಿಚಾರಣೆ - ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ, ನನ್ನ ಉಕ್ತ ಲೇಖನದಂತೆ, ಸಾಕ್ಷಿಯ ಸಾಕ್ಷವನ್ನು ಬೆರಳಚ್ಚು ಮಾಡಿಸಲಾಯಿತು.)**

**ಓ ಹೇ ಕೇ ಸರಿ ಅದೆ.**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಗದಗ**